ಇ) ಜಯಧರ	೪೦೧	೫೧೯
ಈ) ವರಲಕ್ಷ್ಮಿ	೫೯೫	೬೯೯
ಉ) ಜಯಲಕ್ಷ್ಮಿ	೫೫೦	೬೮೦
ಊ) ಶಾರದ	೪೮೦	೫೮೦

ಇ) ಹತ್ತಿಯ ಬೆಂಬಲ ಬೆಲೆಯನ್ನು ಕೇಂದ್ರ ಸರ್ಕಾರ ನಿಗದಿಪಡಿಸುವುದು. ಭಾರತೀಯ ಹತ್ತಿ ನಿಗಮವು ವಿದೇಶಿ ಮತ್ತು ಸ್ಥಳೀಯ ಬೇಡಿಕೆಗಳಅನುಗುಣವಾಗಿ ಹತ್ತಿಯನ್ನು ಖರೀದಿಸುತ್ತದೆ. ರಾಜ್ಯ ಸರ್ಕಾರವು ಕೇಂದ್ರ ಸರ್ಕಾರವನ್ನು ಹತ್ತಿಯ ರಫ್ತಿನ ಈ ಮೇಲಿನ ನಿರ್ಭಂದವನ್ನು ತೆಗೆಯಬೇಕೆಂದು ಕೋರಿದೆ. ಅಲ್ಲದೇ, ಬೆಲೆಯ ಸ್ಥಿರತೆಯನ್ನು ಕಾಪಾಡಲು, ಭಾರತ ಹತ್ತಿ ನಿಗಮದ ಮೂಲಕ ಹೆಚ್ಚಿನ ಪ್ರಮಾಣದಲ್ಲಿ ಹತ್ತಿಯನ್ನು ಕೊಳ್ಳಲು ಒತ್ತಾಯಿಸಲಾಗುತ್ತಿದೆ.

ಈ) ಇದನ್ನು ಪರಿಗಣಿಸಲಾಗುವುದು.

ಗಿ. ಮು. ಮೃತ್ಯುಂಜಯ
ಅಧೀಕ್ಷಕ ಕಾರ್ಯದರ್ಶಿ,
ಕೃಷಿ ಮತ್ತು ಪಶುಸಂಗೋಪನಾ ಇಲಾಖೆ.

ಗ್ರಾಮ ಪಂಚಾಯಿತಿಗಳ ಆದಾಯ ಹೆಚ್ಚಿಸುವುದು.

೧೧೬೯ ಶ್ರೀ ಎಸ್. ಸೂರ್ಯನಾರಾಯಣರಾವ್(ಪತ್ತೂರು) ಮಾನ್ಯ ಗ್ರಾಮಾಭಿವೃದ್ಧಿ ಮತ್ತು ಪಂಚಯತ್ ರಾಜ್ಯ ಮಂತ್ರಿಗಳು ದಯವಿಟ್ಟು ತಿಳಿಸುವರೇ ?

ಅ) ಕರ್ನಾಟಕ ಸರ್ಕಾರದ ನೂತನ ಸರ್ಕಾರಿ ವಿದ್ಯುಚ್ಛಕ್ತಿ ಕಾರ್ಖಾನೆಯಿರುವ ಬೈಯಪ್ಪನ ಹಳ್ಳಿ ಪಂಚಾಯಿತಿಗೆ ನೀಡುತ್ತಿರುವ ಕಟ್ಟಡ ಇತ್ಯಾದಿ ತೆರಿಗೆಗಳು ಒಟ್ಟು ಮೊತ್ತವೆಷ್ಟು ?

ಆ) ಸದರೀ ತೆರಿಗೆಯ ಪುನರ್ಪರಿಶೀಲನೆ ಯಾವಾಗ ನಡೆಯಿತು?

ಇ) ಸದರೀ ಕೈಗಾರಿಕೆಯಿಂದ ಪಂಚಾಯತಿ ಪ್ರದೇಶದಲ್ಲಿ ಜನಸಾಂದ್ರತೆ ಹೆಚ್ಚಿ, ಕನಿಷ್ಠ ನಾಗರೀಕ ಸೌಲಭ್ಯಗಳು ಅಲ್ಲಿಯ ಜನರಿಗೆ ದೊರೆಯದಂತಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಈ) ಪರಿಸ್ಥಿತಿಯನ್ನು ನಿವಾರಿಸಲು ಕೈಗಾರಿಕೆಗಳ ಮೇಲಿನ ತೆರಿಗೆ ಹೆಚ್ಚಿಸುವ ಮೂಲಕ ಈ ಪಂಚಾಯತಿ ಮತ್ತು ನಗರ ಹೊರವಲಯದಲ್ಲಿರುವಂತಹ ಅನೇಕ ಪಂಚಾಯತಿಗಳು ಆದಾಯವನ್ನು ಹೆಚ್ಚಿಸುವ ಕ್ರಮವನ್ನು ಸರ್ಕಾರದವರು ಶೀಘ್ರದಲ್ಲಿಯೇ ಕೈಗೊಳ್ಳುವರೆ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಯತ್ ರಾಜ್ ಸಚಿವರು.).—

ಅ) ಯಾವ ತೆರಿಗೆಯನ್ನು ನೀಡುತ್ತಿಲ್ಲ.

ಆ) ಮೇಲಿನ ಉತ್ತರದಿಂದ ಉದ್ಭವಿಸುವುದಿಲ್ಲ.

ಇ) ಗಮನಕ್ಕೆ ಬಂದಿರುತ್ತೆ.

ಈ) ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.

ಶಿಕ್ಷಕರ ದಿನಾಚರಣೆಯ ನಿಧಿಯ ಬಗ್ಗೆ.

೪೦೭ (೧೦೯೨) ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ,

ಅ) ಕರ್ನಾಟಕ ರಾಜ್ಯದಲ್ಲಿ ಶಿಕ್ಷಕರ ದಿನಾಚರಣೆ ನಿಧಿಯನ್ನು ಸಂಗ್ರಹ ಮಾಡುತ್ತಿರುವುದು ನಿಜವೆ ?